OS 28/2019
**ಪಿಡಬ್ಲ್ಯೂ:1**

**ದಿನಾಂಕ 28.02.2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

ಮುಂದುವರಿದ ಪಾಟೀ ಸವಾಲು : ಪ್ರತಿವಾದಿ ಪರಃ ಶ್ರೀ ಎಸ್ ಕೆ ಎನ್ ವಕೀಲರಿಂದಃ

ನಿಪಿ-2 ರಲ್ಲಿ ಕಾಣಿಸಿದ ಜಾಗ ತಿಮ್ಮು ಅಲಿಯಾಸ್ ನಾಗಮ್ಮ ಸಫಲ್ತಿಯವರಿಗೆ ಮಂಜೂರಾದ ಜಾಗದ ಉತ್ತರದ ಅಂಶ ಎಂದರೆ ನನಗೆ ಗೊತ್ತಿಲ್ಲ. ಈಗ ನನಗೆ ತೋರಿಸಿದ ದಾಖಲೆ ತಿಮ್ಮು ಅಲಿಯಾಸ್ ನಾಗಮ್ಮ ಸಫಲ್ತಿಯವರಿಗೆ ಮಂಜೂರಾದ ಸಾಗುವಳಿ ಚೀಟಿ ಎಂದರೆ ಸರಿ. ಸದ್ರಿ ದಾಖಲೆಯನ್ನು ನಿಡಿ-4 ಎಂದು ಗುರುತಿಸಲಾಯಿತು. ತಿಮ್ಮು ಅಲಿಯಾಸ್ ನಾಗಮ್ಮ ಸಫಲ್ತಿಯವರು ಪ್ರತಿವಾದಿ 1 ರವರಿಗೆ ಮಾಡಿಕೊಟ್ಟ ನಿಡಿ-1 ದಾಖಲೆಯನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ನಿಪಿ-5 ರಲ್ಲಿ ಕಾಣಿಸಿರುವ ಕಾಂಕ್ರಿಟ್ ಹಾಕಿರುವ ರಸ್ತೆ ರಾಮೆಟ್ಟು ಪಲ್ಕೆ ಪಂಚಾಯತ್ ರಸ್ತೆ. ನಿಪಿ-6 ಭಾವಚಿತ್ರದಲ್ಲಿ ಕಂಡು ಬರುವ ಆಸ್ತಿ ನನ್ನ ತಂದೆಗೆ ನಿಪಿ-1 ರ ಪ್ರಕಾರ ಬಂದಿರುತ್ತದೆ. ನಿಪಿ-6 ಮತ್ತು 7 ಭಾವಚಿತ್ರದಲ್ಲಿ ಕಾಣುವ ಚಿತ್ರಣಗಳು ದಾವಾ ಎ ಅನೂಸೂಚಿ ಆಸ್ತಿಯ ಪಶ್ಚಿಮ ದಿಕ್ಕಿನ ಆಸ್ತಿಯ ಚಿತ್ರಣಗಳು ಆಗಿರುತ್ತದೆ ಎಂದರೆ ಇರಬಹುದು. ನಿಪಿ-7 ರಲ್ಲಿ ಕಂಡು ಬರುವ ಮನೆ ಶ್ರೀನಿವಾಸ ಆಚಾರ್ಯರವರ ಮನೆ. ಶ್ರೀನಿವಾಸ ಆಚಾರ್ಯರವರ ಮನೆಯ ಪಕ್ಕದಲ್ಲಿ ನಿಪಿ-7 ರಲ್ಲಿ ಕಂಡು ಬರುವ ಹಾಗೆ ಕಲ್ಲಿನ ಗೋಡೆ ಇದೆ. ಸದ್ರಿ ಗೋಡೆಗೆ ತಾಗಿಕೊಂಡಂತೆ ನಿಪಿ-7 ರಲ್ಲಿ ಕಂಡು ಬರುವ 12 ಅಡಿ ಅಗಲದ ರಸ್ತೆ ಇದೆ ಎಂದರೆ ಸಾಕ್ಷಿಯು ಅದನ್ನು ಅಕ್ರಮವಾಗಿ ನಿರ್ಮಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದ್ರಿ ರಸ್ತೆಯು ನಿಪಿ-6 ರಲ್ಲಿ ಕಂಡು

ಬರುವ ನಮ್ಮ ಜಾಗದ ದಕ್ಷಿಣಕ್ಕೆ 1ನೇ ಪ್ರತಿವಾದಿಗೆ ನಿಡಿ-1 ರಲ್ಲಿ ಕೊಡಲ್ಪಟ್ಟ ಜಾಗ ಇದೆ. ಸದ್ರಿ ರಸ್ತೆಯ ಮೂಲಕ 1ನೇ ಪ್ರತಿವಾದಿಯವರ ಜಾಗಕ್ಕೆ ಸಂಪರ್ಕ ಇದೆ ಎಂದರೆ ಸರಿಯಲ್ಲ. ನಿಡಿ-1 ರಲ್ಲಿ ಕಂಡು ಬರುವ ಸ್ಥಿರಾಸ್ತಿಗೆ ಬೇರೆ ಯಾವ ದಿಕ್ಕಿನಲ್ಲಿ ಕೂಡ ಸದ್ರಿ ಸ್ಥಿರಾಸ್ತಿಯನ್ನು ಸಂಪರ್ಕಿಸುವ ರಸ್ತೆ ಇಲ್ಲ ಎಂದರೆ ಸರಿಯಲ್ಲ. ನಿಪಿ-6 ಮತ್ತು 7 ರಲ್ಲಿ ಕಂಡು ಬರುವ ರಸ್ತೆಯು ರಾಮೆಟ್ಟು ಪಲ್ಕೆ ರಸ್ತೆಯಿಂದ ದಾವಾ ಎ ಅನುಸೂಚಿ ಸ್ಥಿರಾಸ್ತಿ ಮತ್ತು ನಿಡಿ-1 ರಂತೆ 1ನೇ ಪ್ರತಿವಾದಿಗೆ ನೀಡಿದ ಜಾಗದಲ್ಲಿ ಹಾದು ಹೋಗಿ ಪ್ರತಿವಾದಿ 2 ಮತ್ತು 3 ರವರ ಜಾಗಕ್ಕೆ ಸಂಪರ್ಕ ಕಲ್ಪಿಸುತ್ತದೆ ಎಂದರೆ ಸರಿಯಲ್ಲ. ನಿಪಿ-6 ಮತ್ತು 7 ರಲ್ಲಿ ಕಂಡು ಬರುವ ರಸ್ತೆಯು 1ನೇ ಪ್ರತಿವಾದಿಯ ಜಾಗಕ್ಕೆ ಹೋಗುತ್ತದೆ. ನಿಪಿ-6 ಮತ್ತು 7 ರಲ್ಲಿ ಕಂಡು ಬರುವ ರಸ್ತೆಯು ಬಹಳ ಹಿಂದಿನಿಂದಲೂ ಇದ್ದು ಅದನ್ನು 2 ಮತ್ತು 3 ನೇ ಪ್ರತಿವಾದಿಗಳು ಉಪಯೋಗಿಸುತ್ತಿದ್ದರು ಎಂದರೆ ಸರಿಯಲ್ಲ. ಸದ್ರಿ ರಸ್ತೆಯನ್ನು 2 ಮತ್ತು 3ನೇ ಪ್ರತಿವಾದಿಗಳು ಶಾಶ್ವತವಾಗಿ ಉಪಯೋಗಿಸಿಕೊಳ್ಳಲು ನನ್ನ ಅಜ್ಜಿ ತಿಮ್ಮು ಅಲಿಯಾಸ್ ನಾಗಮ್ಮ ರವರು ದಿನಾಂಕ 26.04.2017 ರಲ್ಲಿ ಸದ್ರಿಯವರಿಗೆ ಒಪ್ಪಿಗೆ ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಶ್ರೀಧರ ಅಚಾರ್ಯ ,ಚಂದ್ರಯ್ಯ ಅಚಾರ್ಯ, ದಿನೇಶ್ ಪೂಜಾರಿ ಬಿನ್ ಬಾಬು ಪೂಜಾರಿ ರವರ ಪರಿಚಯ ಇದೆ. ತಿಮ್ಮು ಅಲಿಯಾಸ್ ನಾಗಮ್ಮ ರವರು ಶ್ರೀಧರ ಅಚಾರ್ಯ, ಚಂದ್ರಯ್ಯ ಅಚಾರ್ಯ, ದಿನೇಶ್ ಪೂಜಾರಿ ಬಿನ್ ಬಾಬು ಪೂಜಾರಿ ಯವರ ಸಮಕ್ಷಮ ಒಪ್ಪಿಗೆ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ಭಾವಚಿತ್ರದಲ್ಲಿ ಕಾಣುವ ರಸ್ತೆ ಹಾಗೂ ನಿಪಿ-6 ಮತ್ತು 7 ಕಾಣುವ ರಸ್ತೆ ಒಂದೇ ಅಗಿರುತ್ತದೆ. ಸದ್ರಿ ಭಾವಚಿತ್ರವನ್ನು ನಿಡಿ-5 ಎಂದು ಗುರುತಿಸಲಾಯಿತು. ನಿಪಿ-1 ನ್ನು ನಾನು ಮತ್ತು ನನ್ನ ತಂದೆಯವರು ನೀಡಿದ ಅನುಭವದಂತೆ ತಯಾರಿಸಿದ ದಾಖಲೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಇರುವ ಒಕ್ಕಣೆ ಬಗ್ಗೆ ತಿಮ್ಮು ಅಲಿಯಾಸ್ ನಾಗಮ್ಮ ರವರಿಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ತಿಮ್ಮು ಅಲಿಯಾಸ್

ನಾಗಮ್ಮ ರವರು ಮೃತಪಡುವವರೆಗೂ ದಾವಾ ಎ ಅನುಸೂಚಿ ಆಸ್ತಿಯಲ್ಲಿ ವಾಸ ಇದ್ದರು ಎಂದರೆ ಸರಿಯಲ್ಲ. ತಿಮ್ಮು ಅಲಿಯಾಸ್ ನಾಗಮ್ಮ ರವರ ವೃದ್ಯಪ್ಯದ ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಂಡು ನಿಪಿ-1 ದಾಖಲೆಯನ್ನು ತಯಾರು ಮಾಡಿದ್ದೇವೆ ಎಂದರೆ ಸರಿಯಲ್ಲ. ತಿಮ್ಮು ಅಲಿಯಾಸ್ ನಾಗಮ್ಮ ರವರು ನಿಪಿ-1 ದಾಖಲೆಯ ಮಾಹಿತಿಯ ಬಗ್ಗೆ ಆಕ್ಷೇಪಿಸಿ ನನ್ನ ತಂದೆಯವರ ವಿರುದ್ದ ಹಿರಿಯ ನಾಗರಿಕರ ಪ್ರಾಧಿಕಾರದಲ್ಲಿ ದೂರು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದ್ರಿ ದೂರು ತನಿಖೆ ಹಂತದಲ್ಲಿ ಇರುವಾಗ ತಿಮ್ಮು ಅಲಿಯಾಸ್ ನಾಗಮ್ಮ ರವರು ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ತಿಮ್ಮು ಅಲಿಯಾಸ್ ನಾಗಮ್ಮ ರವರು ದೂರು ನೀಡಿರುವುದಿಲ್ಲ. 1 ರಿಂದ 3ನೇ ಪ್ರತಿವಾದಿಗಳ ಒತ್ತಡದಿಂದ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದ್ರಿ ದೂರನ್ನು ತಿಮ್ಮು ಅಲಿಯಾಸ್ ನಾಗಮ್ಮ ರವರು ತನ್ನ ಸ್ವ ಬುದ್ದಿಯಿಂದ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ತಿಮ್ಮು ಅಲಿಯಾಸ್ ನಾಗಮ್ಮ ರವರು ಅನಾರೋಗ್ಯಕ್ಕೆ ತುತ್ತಾದ ನಂತರ ನನ್ನ ತಂದೆಯವರು ಪ್ರಾಧಿಕಾರಕ್ಕೆ ಸುಳ್ಳು ಮಾಹಿತಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ತಿಮ್ಮು ಅಲಿಯಾಸ್ ನಾಗಮ್ಮರವರಿಗೆ ಮಾಹಿತಿ ನೀಡಿದ್ದರೆ ನಿಪಿ-1 ರಲ್ಲಿ ರಸ್ತೆಯ ಬಗ್ಗೆ ಸ್ಪಷ್ಟವಾಗಿ ಬರೆಯುತ್ತಿದ್ದರು ಎಂದರೆ ಸರಿಯಲ್ಲ. ನಿಪಿ-6 ಮತ್ತು 7 ರಲ್ಲಿ ಕಂಡು ಬರುವ ರಸ್ತೆಯನ್ನು ಅಡ್ಡಪಡಿಸುವ ಅಕ್ಷೇಪ ಪಡಿಸುವ ಹಕ್ಕು ನನಗೆ ಹಾಗೂ ನನ್ನ ತಂದೆಗೆ ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-1 ರಲ್ಲಿ ತಿಮ್ಮು ಅಲಿಯಾಸ್ ನಾಗಮ್ಮ ರವರು ರಸ್ತೆಯ ಬಗ್ಗೆ ಸ್ಪಷ್ಟವಾಗಿ ಬರೆದಿರುತ್ತಾರೆ ಎಂದರೆ ಸರಿಯಲ್ಲ. ನಿಡಿ-1 ರಲ್ಲಿ ಕಾಣುವ ರಸ್ತೆಯನ್ನು ಪ್ರತಿವಾದಿಗಳು ಉಪಯೋಗಿಸಿಕೊಂಡು ಬರುತ್ತಿದ್ದ ಮಾಹಿತಿ ಇದ್ದರೂ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ತಿಮ್ಮು ಅಲಿಯಾಸ್ ನಾಗಮ್ಮ ರವರು ಅವರ ಜೀವಿತ ಕಾಲದಲ್ಲಿ 2 ಮತ್ತು 3ನೇ ಪ್ರತಿವಾದಿಗಳಿಗೆ ಮತ್ತು ಇತರರಿಗೆ ರಸ್ತೆಯನ್ನು ಉಪಯೋಗಿಸುತ್ತಿದ್ದ ಬಗ್ಗೆ ಆಕ್ಷೇಪ ಮಾಡಿರಲಿಲ್ಲ ಎಂದರೆ ಸಾಕ್ಷಿಯು ರಸ್ತೆಯೇ ಇರಲಿಲ್ಲ ಎಂದು ನುಡಿಯುತ್ತಾರೆ. ನಿಪಿ-5

ರಿಂದ 7 ಭಾವಚಿತ್ರಗಳನ್ನು ದಾವೆ ದಾಖಲು ಮಾಡುವ ಸಮಯದಲ್ಲಿ ತೆಗೆದು ಹಾಜರುಪಡಿಸಿರುತ್ತೇವೆ ಎಂದರೆ ಸರಿ. ನಿಪಿ-6 ಮತ್ತು 7 ರಲ್ಲಿ ಕಂಡು ಬರುವ ಅಡ್ಡಲಾಗಿ ಕಂಡು ಬರುವ ತೊಡಮೆ (ಗೇಟ್) ವಿವಾದದ ಬಗ್ಗೆ ಪೊಲೀಸ್ ಠಾಣೆಯಲ್ಲಿ ವಿವಾದ ಇತ್ತು ಎಂದರೆ ಸರಿ. ಆ ರೀತಿ ತೊಡಮೆಯನ್ನು ನಾನು ಮತ್ತು ನನ್ನ ತಾಯಿ ಹಾಕಿ ರಸ್ತೆಗೆ ಅಡ್ಡಿಪಡಿಸಿದ್ದಾಕ್ಕಾಗಿ ಪ್ರತಿವಾದಿ 1 ರಿಂದ 3 ರವರು ಪೊಲೀಸ್ ಠಾಣೆಯಲ್ಲಿ ಪಿರ್ಯಾದಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ದೂರು ಕೊಟ್ಟ ನಂತರ ಸದ್ರಿ ತೊಡಮೆಯನ್ನು ತೆಗೆಯಬೇಕು ಎಂದು ಪೊಲೀಸರು ಹೇಳಿದ್ದ ಮೇರೆಗೆ ಪ್ರಸ್ತುತ ತೆಗೆದಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-6 ಮತ್ತು 7 ರಲ್ಲಿ ಕಂಡು ಬರುವ ತೊಡೆಮ ಪ್ರಸ್ತುತ ಇಲ್ಲ ಎಂದರೆ ಸರಿಯಲ್ಲ. ಇವತ್ತಿನವರೆಗೂ 1 ರಿಂದ 3 ನೇ ಪ್ರತಿವಾದಿಗಳು ಸದ್ರಿ ರಸ್ತೆಯ ಮೂಲಕ ಅವರ ಸ್ಥಿರಾಸ್ತಿಗೆ ಹೋಗುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ನಮ್ಮ ವಿರುದ್ದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ ಪ್ರತಿಕಾರವಾಗಿ ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ರಸ್ತೆಯು ಹಿಂದಿನ ಕಾಲದಿಂದಲೂ ಇದ್ದ ಬಗ್ಗೆ ಕುರುಹು ಕಂಡು ಬರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಎ ಅನುಸೂಚಿ ಅಸ್ತಿಯ ಬಗ್ಗೆ ನನ್ನ ತಂದೆಗೆ, ನಾಗಮ್ಮ ಅಥವಾ ಬೇರೆ ಯಾರಿಗೂ ತೊಂದರೆ, ಕಿರುಕುಳ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಎ ಅನುಸೂಚಿ ಆಸ್ತಿಯಲ್ಲಿ ನಿಪಿ-6 ಮತ್ತು 7 ರಲ್ಲಿ ಕಂಡು ಬರುವ ರಸ್ತೆಯನ್ನು ಉಪಯೋಗಿಸಿಕೊಳ್ಳು ಹಕ್ಕು 1 ಮತ್ತು 2 ನೇ ಪ್ರತಿವಾದಿಯವರಿಗೆ ಇದೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ 2016 ರಲ್ಲಿ ಮನೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. 2019 ರಲ್ಲಿ ಕಟ್ಟಿರುತ್ತಾರೆ. 2 ನೇ ಪ್ರತಿವಾದಿ ಮನೆ ಕಟ್ಟುವಾಗ ತಿಮ್ಮು ಯಾನೆ ನಾಗಮ್ಮ ಜೀವಂತ ಇದ್ದರು. 2 ನೇ ಪ್ರತಿವಾದಿ ಮನೆ ಕಟ್ಟುವ ಮೊದಲು ಹಳೆ ಮನೆ ಇತ್ತು ಎಂದರೆ ಸರಿಯಲ್ಲ. ವಾದಪತ್ರದಲ್ಲಿ, ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ 2 ನೇ ಪ್ರತಿವಾದಿಗೆ ನೀಡಿದ ರಸ್ತೆ ಹಕ್ಕನ್ನು ವಾಪಸ್ಸು ಪಡೆದುಕೊಂಡಿರುತ್ತೆವೆ ಎಂದು

ಪ್ರತಿಪಾದಿಸಿರುವುದು ಸುಳ್ಳು ಎಂದರೆ ಸರಿಯಲ್ಲ. ದಾವೆಗೆ ಯಾವುದೇ ವ್ಯಾಜ್ಯ ಕಾರಣ ಉಂಟಾಗಿರುವುದಿಲ್ಲಎಂದರೆ ಸರಿಯಲ್ಲ. ನಾಗಮ್ಮ ರವರು ಮೃತಪಟ್ಟ ನಂತರ ದಾವಾ ಆಸ್ತಿಯಲ್ಲಿರುವ ಮನೆ ಖಾಲಿ ಇದೆ ಎಂದರೆ ಸರಿಯಲ್ಲ . ನಾನು, ನನ್ನ ತಂದೆ, ನನ್ನ ತಾಯಿ ದಾವಾ ಆಸ್ತಿಯಲ್ಲಿ ವಾಸ ಇಲ್ಲ ಮತ್ತು ಅಲ್ಲಿಗೆ ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ, ಪ್ರಮಾಣಪತ್ರದಲ್ಲಿ, ವಾದಪತ್ರದಲ್ಲಿ ತಿಳಿಸಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.
ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

2 ನೇ ಹೆ.ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ., ಕಾರ್ಕಳ